# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 891 |
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರಕಾರಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಬಳಸುವ ಉಪ ಖನಿಜ ಉತ್ಪನ್ನಗಳಿಗೆ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಗೆ ಸಹಿತ ಅನ್ವಯಿಕ ಶುಲ್ಕ ಸರಕಾರಕ್ಕೆ ಸಂದಾಯವಾಗದೆ ಸರಕಾರದ ಬೊಕ್ಕಸಕ್ಕೆ ನಷ್ಟವಾಗಿದೆಯೇ: ಅದರ ಮೊತ್ತವೆಷ್ಟು; (ಕಳೆದ ಮೂರು ವರ್ಷಗಳ ವಿವರ ನೀಡುವುದು) | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ (ಕೆಎಂಎಂಸಿಆರ್) 1994 ರಂತೆ ಸರ್ಕಾರಿ ಜಮೀನಿನಲ್ಲಿ ಮತ್ತು ನಿಯಮ 3-A ರಲ್ಲಿ ಅನುಮತಿ/ ಮಂಜೂರಾದ ಕಾರ್ಯಾದೇಶ/ ಗುತ್ತಿಗೆಗಳಿಗೆ ರಾಜಧನದ ಶೇ. 10ರಷ್ಟು ಡಿಎಂಎಫ್ ಮತ್ತು ಶೇ.40 ರಷ್ಟು ಹೆಚ್ಚುವರಿ ಪಾವತಿ ಮಾಡುತ್ತಾರೆ. ಹರಾಜು ಮೂಲಕ ಮಂಜೂರಾದ ಗುತ್ತಿಗೆದಾರರು ಬಿಡ್ ಪ್ರೀಮಿಯಮ್ ಮೊತ್ತ ಮತ್ತು ಶೇ.10 ರಷ್ಟು ಡಿಎಂಎಫ್ ಪಾವತಿ ಮಾಡುತ್ತಾರೆ. ಪಟ್ಟಾ ಜಮೀನಿನಲ್ಲಿ ಮಂಜೂರು ಮಾಡಿದ ಲೈಸೆನ್ಸ್ ನೀಡಲಾದ ಗುತ್ತಿಗೆದಾರರು ರಾಜಧನದ ಶೇ.30ರಷ್ಟು ಡಿಎಂಎಫ್ ಮೊತ್ತಗಳನ್ನು ಸಂಗ್ರಹಿಸಲಾಗುತ್ತಿದೆ.<br><br>ಸರಕಾರಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಬಳಸುವ ಉಪ ಖನಿಜ ಉತ್ಪನ್ನಗಳಿಗೆ ಕೆಎಂಎಂಸಿಆರ್ 1994ರ ನಿಯಮ 42 ರಂತೆ ಖನಿಜ ರವಾನೆ ಪರವಾನಿಗೆಯನ್ನು ಕಡ್ಡಾಯವಾಗಿ ಪಡೆದು ಖನಿಜವನ್ನು ಸಾಗಾಣಿಕೆ ಮಾಡಿ ಬಳಕೆ ಮಾಡಿಕೊಳ್ಳಬೇಕಾಗಿರುತ್ತದೆ. ಪರವಾನಿಗೆಯನ್ನು ಪಡೆಯುವ ಸಮಯದಲ್ಲಿ ಉಪಖನಿಜಗಳಿಗೆ ಅನ್ವಯವಾಗುವ ರಾಜಧನ ಹೆಚ್ಚುವರಿ ಶುಲ್ಕ ಡಿಎಂಎಫ್, ಬಿಡ್ ಪ್ರೀಮಿಯಮ್ ಮತ್ತು ಡಿಎಂಎಫ್ ಶುಲ್ಕಗಳನ್ನು ಸಂಗ್ರಹಿಸಲಾಗುತ್ತದೆ. |
| ಆ) | ಸರಕಾರಿ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಖನಿಜ ಮತ್ತು ಉಪ ಖನಿಜಗಳಿಗೆ ಸರಕಾರಕ್ಕೆ ಪಾವತಿಸಬೇಕಾದ ರಾಜಧನ, ಇತರ ಅನ್ವಯಿಕ ಶುಲ್ಕ ಇತ್ಯಾದಿಗಳನ್ನು ಪಾವತಿಸಿರುವ ಬಗ್ಗೆ ಹೇಗೆ ಖಚಿತಪಡಿಸಿಕೊಳ್ಳಲಾಗುತ್ತಿದೆ; ಕಾಮಗಾರಿ ಬಿಲ್ಲು ಪಾವತಿ ಮಾಡುವಾಗ ಸದರಿ ಸರಕಾರಕ್ಕೆ ಪಾವತಿಸಬೇಕಾದ ಶುಲ್ಕಗಳನ್ನು ಕಟಾಯಿಸಲಾಗಿದೆಯೇ; | ಸರ್ಕಾರಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಕೆಲವು ಕಾಮಗಾರಿ ಗುತ್ತಿಗೆದಾರರು ಖನಿಜ ಸಾಗಾಣಿಕೆ ಪರವಾನಿಗೆ ಪಡೆದು ಅಭಿವೃದ್ಧಿ ಕೆಲಸಗಳಲ್ಲಿ ಬಳಕೆ ಮಾಡುತ್ತಿದ್ದು, ಪೂರ್ಣ ಪ್ರಮಾಣದ ರಾಜಧನ, ಡಿಎಂಎಫ್ ಮತ್ತು ಇತರ ಅನ್ವಯಿಕ ಶುಲ್ಕ ಪಾವತಿಯಾಗಿರುತ್ತದೆ. ಸರ್ಕಾರಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಖನಿಜ ರವಾನೆ ಪರವಾನಗಿ ಪಡೆಯದೇ ಉಪಯೋಗಿಸಿದ ಖನಿಜದ ಪ್ರಮಾಣಕ್ಕೆ ರಾಜಧನ ಮಾತ್ರ ಕಟಾಯಿಸಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮ ಮಾಡಲಾಗುತ್ತಿದ್ದು, ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ (ಡಿಎಂಎಫ್) ಹಾಗೂ ಇತರ ಅನ್ವಯಿಕ ಶುಲ್ಕ ಕಟಾವಣೆ ಆಗುತ್ತಿರುವುದಿಲ್ಲ. ಈ ಬಗ್ಗೆ ಸರ್ಕಾರಿ ಕಾಮಗಾರಿ ಇಲಾಖೆಗಳಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಸೂಕ್ತ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕಾಮಗಾರಿಗಳ ಟೆಂಡರ್ ಕರೆಯಲು ಸೂಚನೆಗಳನ್ನು ಹಾಗೂ ಸುತ್ತೋಲೆ ಮುಖಾಂತರ ಎಲ್ಲಾ ಸರ್ಕಾರಿ ಕಾಮಗಾರಿ ಅನುಷ್ಠಾನ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ. |

| | | |
|---|---|---|
| ಇ) | ರಾಜ್ಯದಲ್ಲಿ ಸರಕಾರಿ ಅಭಿವೃದ್ಧಿ ಕಾಮಗಾರಿಗಳಿಗೆ ಅವಶ್ಯವಿರುವ ಉಪಖನಿಜಗಳನ್ನು ಕಲ್ಲುಗಣಿ ಗುತ್ತಿಗೆದಾರರು ಮತ್ತು ಸ್ಟೋನ್ ಕ್ರಷರ್ ಗಳಿಂದ ಖರೀದಿಸಿ ಖನಿಜ ರವಾನೆ ಪರವಾನಿಗೆ ಪಡೆಯದೆ ಸಾಗಣೆಯಾಗುತ್ತಿರುವ ಬಗ್ಗೆ ಸರಕಾರ ವಹಿಸಿರುವ ಕ್ರಮವೇನು; | ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:<br><br>1. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-B ರಂತೆ ರಾಷ್ಟ್ರೀಯ ಹೆದ್ದಾರಿ / ರಾಜ್ಯ ಹೆದ್ದಾರಿ ಸೇರಿದಂತೆ ಇತ್ಯಾದಿ ಕಾಮಗಾರಿಗಳಿಗೆ ಅವಶ್ಯವಿರುವ ಉಪಖನಿಜಗಳ ಪೂರೈಕೆಗಾಗಿ ಕಾಮಗಾರಿ ಗುತ್ತಿಗೆದಾರರಿಗೆ ಹರಾಜು ರಹಿತವಾಗಿ ಉಪಖನಿಜ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತಿದೆ. ನಿಯಮ-3-B ರಂತೆ ಮಂಜೂರು ಮಾಡುವ ಗುತ್ತಿಗೆ ಪ್ರದೇಶಗಳಲ್ಲಿ ಉಪಖನಿಜ ಉತ್ಪಾದಿಸಿ ಕಾಮಗಾರಿ ನಿರ್ವಹಿಸುವ ಸ್ಥಳಗಳಿಗೆ ಸಾಗಾಣಿಕೆ ಮಾಡಲು Royalty Exempted Mineral Dispatch Permit (REMDP) ವಿತರಿಸುತ್ತಿದ್ದು, ಕಲ್ಲುಗಣಿ ಗುತ್ತಿಗೆಗಳ ಪ್ರದೇಶದಲ್ಲಿ ಉತ್ಪಾದಿಸಿ ಸರ್ಕಾರಿ ಕಾಮಗಾರಿಗಳಿಗೆ ಬಳಕೆಯಾಗುವ ಉಪಖನಿಜದ ಪ್ರಮಾಣಕ್ಕೆ ಬಿಲ್ಲುಗಳಲ್ಲಿ ರಾಜಧನ, ಹೆಚ್ಚುವರಿ ಪಾವತಿ, ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ವಂತಿಕೆ ಸೇರಿದಂತೆ ಇತರೆ ಅನ್ವಯಿಕ ಶುಲ್ಕಗಳನ್ನು ಕಟಾಯಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲಾಗುತ್ತಿದೆ.<br><br>2. ಖನಿಜ ರವಾನೆ ಪರವಾನಿಗೆಯನ್ನು ಕಡ್ಡಾಯವಾಗಿ ಪಡೆದು ಖನಿಜವನ್ನು ಸಾಗಾಣಿಕೆ ಮಾಡಲು ಸರ್ಕಾರಿ ಕಾಮಗಾರಿ ಇಲಾಖೆಗಳಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಟೆಂಡರ್ ಡಾಕ್ಯುಮೆಂಟ್ ನಲ್ಲಿ ಸೂಕ್ತ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕಾಮಗಾರಿಗಳ ಟೆಂಡರ್ ಕರೆಯಲು ಸೂಚನೆಗಳನ್ನು ಸುತ್ತೋಲೆ ಮುಖಾಂತರ ಎಲ್ಲಾ ಸರ್ಕಾರಿ ಕಾಮಗಾರಿ ಅನುಷ್ಠಾನ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.<br><br>3. Integrated Lease Management System (ILMS) version-II ಜಾರಿಗೊಳಿಸಲಾಗುತ್ತಿದ್ದು, ಅನಧಿಕೃತ ಖನಿಜ ಸಾಗಾಣಿಕೆಯನ್ನು ತಡೆಗಟ್ಟಲು ಖನಿಜ ಸಾಗಾಣಿಕಾ ವಾಹನಗಳಿಗೆ GPS ಅಳವಡಿಸಿ ಕೇಂದ್ರೀಕೃತವಾಗಿ ನಿಗಾವಹಿಸಲು ತಂತ್ರಾಂಶ ರೂಪಿಸಲಾಗುತ್ತಿದೆ.<br><br>4. ಕಲ್ಲು ಗಣಿಗುತ್ತಿಗೆ ಪ್ರದೇಶಗಳಲ್ಲಿ ಖನಿಜ ರವಾನೆ ಪರವಾನಗಿ ಪಡೆಯದೇ ಹೆಚ್ಚುವರಿಯಾಗಿ ಮತ್ತು ಗುತ್ತಿಗೆ ಪ್ರದೇಶಗಳ ಒತ್ತುವರಿ ಮಾಡಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಉಪಖನಿಜವನ್ನು ಉತ್ಪಾದಿಸಿ, ಸಾಗಾಣಿಕೆ ಮಾಡಿರುವುದನ್ನು ಅಂದಾಜಿಸಲು ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ರವರಿಂದ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ಕೈಗೊಂಡು ಖನಿಜ ಉತ್ಪಾದನೆ ಮಾಡಲಾದ ಪ್ರಮಾಣಕ್ಕೆ ಅನುಗುಣವಾಗಿ ರಾಜಧನ, ಡಿಎಂಎಫ್ ವಂತಿಗೆ ಮತ್ತು ಇತರೆ ಅನ್ವಯಿಕ ಶುಲ್ಕ ಪಾವತಿಯ ಸೋರಿಕೆ ತಡೆಗಟ್ಟಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ) | ಖನಿಜ ಮತ್ತು ಉಪಖನಿಜಗಳ ವ್ಯವಹಾರಗಳನ್ನು ನೋಂದಾವಣೆಯ ಅನುಪಸ್ಥಿತಿ ಹಾಗೂ ವಾಣಿಜ್ಯ ತೆರಿಗೆಗಳ ಇಲಾಖೆ ಜೊತೆ ಸಮನ್ವಯತೆಯಲ್ಲದ ಸಮಯೋಚಿತ ಅನುಷ್ಠಾನ ಕ್ರಮಗಳ ಕೊರತೆ ಸರಕಾರದ ಬೊಕ್ಕಸಕ್ಕೆ ಮಾಡುವ ನಷ್ಟವನ್ನು ಸರಿಪಡಿಸಲು ಸರಕಾರದ ಕ್ರಮಗಳೇನು; | ಮಾನ್ಯ ಮುಖ್ಯಮಂತ್ರಿ ರವರು 2025-26ನೇ ಸಾಲಿನ ಆಯವ್ಯಯದ ಭಾಷಣ ಕಂಡಿಕೆ (493)ರ ಘೋಷಣೆಯಲ್ಲಿ ಪ್ರಸ್ತಾವನೆಯಾಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆ **Integrated Lease Management System (ILMS)** ತಂತ್ರಾಂಶವನ್ನು ಹಾಗೂ ವಾಣಿಜ್ಯ ಇಲಾಖೆಗೆ ಸಂಬಂಧಿಸಿದ ತಂತ್ರಾಂಶವನ್ನು ಸಂಯೋಜಿಸಲು ಕ್ರಮ ವಹಿಸಲಾಗುತ್ತಿದೆ.<br><br>ಮುಂದುವರೆದು, ಕೆಎಂಎಂಸಿಆರ್ 1994 ರ ನಿಯಮ 43 ರಲ್ಲಿ ಉಪಖನಿಜ ಸಾಗಾಣಿಕೆ ಮಾಡುವ ವಾಹನದಲ್ಲಿ ಖನಿಜ ರವಾನೆ ಪರವಾನಿಗೆ **(MDP) e-way bill in Form –GSTEWB – 01** ಕಡ್ಡಾಯವಾಗಿ ಹೊಂದಲು ನಿಯಮಗಳಿಗೆ ಅಗತ್ಯ ತಿದ್ದುಪಡಿ ತರಲಾಗುತ್ತಿದೆ. |
| ಉ) | ಈ ನಷ್ಟದ ಕುರಿತು ಸಿ ಎ ಜಿ ವರದಿಯಲ್ಲಿ ಆಕ್ಷೇಪಿಸಿದ್ದು ಸೂಕ್ತ ತನಿಖೆಗೆ ಆದೇಶಿಸಿದೆಯೇ; ಯಾವಾಗ ಈ ಬಗ್ಗೆ ಕ್ರಮವಹಿಸಲಾಗುವುದು? | ಸಿಎಜಿ ವರದಿಯಲ್ಲಿ ಸರ್ಕಾರಿ ಕಾಮಗಾರಿ ಅನುಷ್ಠಾನ ಇಲಾಖೆಯಿಂದ ಡಿಎಂಎಫ್ ವಂತಿಗೆಯನ್ನು ಮತ್ತು ಅನ್ವಯಿಕ ಶುಲ್ಕಗಳ ಸೋರಿಕೆಯನ್ನು ತಡೆಗಟ್ಟಲು ಇಲಾಖೆಯಿಂದ ಸೂಕ್ತ ತಂತ್ರಾಂಶ ಅಳವಡಿಸಲು ಸೂಚಿಸಿದ್ದು, ಈ ಸಂಬಂಧ ರಾಜ್ಯದಲ್ಲಿನ ಅಭಿವೃದ್ಧಿ ಕಾಮಗಾರಿ ಇಲಾಖೆಗಳ ಸಹಯೋಗದೊಂದಿಗೆ ಕಾಮಗಾರಿಗಳಲ್ಲಿ ಬಳಕೆ ಮಾಡುವ ಪ್ರಮಾಣಕ್ಕೆ ಅನುಗುಣವಾಗಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕ ಮತ್ತು ಡಿಎಂಎಫ್ ವಂತಿಗೆಯನ್ನು ಕಟಾಯಿಸಲು / ಪಾವತಿಸಿಕೊಳ್ಳುವ ಕುರಿತು ಖನಿಜ ರವಾನೆ ಪರವಾನಿಗೆ ಕಡ್ಡಾಯಗೊಳಿಸಿದೆ. |

ಸಿಐ -ಎಂಎಂಎನ್/220/2025

(ಎಸ್.ಎಸ್.ಮಲ್ಲಿಕಾರ್ಜುನ)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.